ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ.ಎಂ.ಜೆ ವಕೀಲರಿಂದಃ

ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ತಾಯಿಯನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನಮ್ಮ ಅಜ್ಜಿ ದೇವಮ್ಮನವರನ್ನು ನಾನು ನೋಡಿರುವುದಿಲ್ಲ. ನಮ್ಮ ಅಜ್ಜಿ ದೇವಮ್ಮನವರು 1987 ರಲ್ಲಿ ತೀರಿಕೊಂಡಿರುತ್ತಾರೆ ಎಂದು ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅಜ್ಜಿರವರು ತೀರಿಕೊಳ್ಳುವ ಸಮಯಕ್ಕೆ ನಾನು ಇನ್ನು ಜನಿಸಿರಲಿಲ್ಲ. ನಮ್ಮ ಅಜ್ಜಿ ಜೀವಂತ ಇದ್ದ ಸಮಯ ಏನೆಲ್ಲಾ ವ್ಯವಹಾರ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಅಜ್ಜಿಗೆ ಸರ್ವೇ ನಂಬರ್ 67 ರಲ್ಲಿ 1 ಎಕರೆ ಜಮೀನು ಇತ್ತು ಎಂದರೆ ಸರಿ, ಸಾಕ್ಷಿ ಮುಂದುವರೆದು ಸರ್ವೇ ನಂಬರ್ 67 ರಲ್ಲಿ ನಮ್ಮ ಅಜ್ಜಿಗೆ ಯಾವುದೇ ಜಮೀನು ಇರಲಿಲ್ಲ. ನಮ್ಮ ಅಜ್ಜಿಗೆ ಬಂದಿದ್ದ ಸರ್ವೇ ನಂಬರ್ 67 ರ 1 ಎಕರೆ ಜಮೀನನ್ನು ದಿನಾಂಕ 20.05.1979 ರಂದು ನಮ್ಮ ದೊಡ್ಡಪ್ಪನಾದ ಸಿದ್ದರಾಜು ರವರಿಗೆ ಭಾಗಕ್ಕೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅಜ್ಜಿರವರಿಗೆ ಸರ್ವೇ ನಂಬರ್ 165 ರಲ್ಲಿ 1 ಎಕರೆ ಜಮೀನು ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 20.05.1979 ರಂದು ಸರ್ವೇ ನಂಬರ್ 165 ರಲ್ಲಿ 1 ಎಕರೆ ಜಮೀನನ್ನು ನನ್ನ ಅಣ್ಣನಾದ 3 ನೇ ಪ್ರತಿವಾದಿ ರಾಜಹನುಮಯ್ಯನ ಭಾಗಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 233 ರಲ್ಲಿ ಒಟ್ಟು 6 ಎಕರೆ 20 ಜಮೀನು ಇತ್ತು ಎಂದರೆ ಸರಿ. ಆ ಪೈಕಿ ಅರ್ಧ ಭಾಗವನ್ನು ಪೂರ್ವದ ಸಿ.ಪಿ. ಸಿದ್ದರಾಜು ಮಗ ಭಾಗಕ್ಕೆ ಮತ್ತು ಉಳಿದ ಅರ್ಧ ಭಾಗವನ್ನು ಪಶ್ಚಿಮದ

ಕಡೆ 3 ನೇ ಪ್ರತಿವಾದಿಯ ಭಾಗಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಭಾಗದಲ್ಲಿ ತಂದೆಯ ಭಾಗಕ್ಕೆ ದಾವಾ ಐಟಂ-3 ರ ಸ್ವತ್ತನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ನಮ್ಮ ತಂದೆಯ ಭಾಗಕ್ಕೆ ಬಂದ ದಾವಾ ಐಟಂ-3 ರ ಸ್ವತ್ತಿನಲ್ಲಿ ಮಾತ್ರ ವಾದಿ ಮತ್ತು ಪ್ರತಿವಾದಿಗಳಿಗೆ ಭಾಗದ ಹಕ್ಕು ಇರುತ್ತದೆ ಎಂದರೆ ಸಾಕ್ಷಿ ಎಲ್ಲಾ ದಾವಾ ಆಸ್ತಿಗಳಲ್ಲಿ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ನಾವು ಉದ್ದೇಶಪೂರ್ವಕವಾಗಿ ಓ.ಎಸ್ 285/2008 ರ ದಾವೆಯ ಸಲ್ಲಿಸಿದ್ದು ಆ ದಾವೆ ವಜಾ ಆದ ಸುಮಾರು 12 ವರ್ಷಗಳ ನಂತರ 3 ನೇ ಪ್ರತಿವಾದಿರವರ ಹೆಸರಿನಲ್ಲಿರುವ ಸ್ವತ್ತನ್ನು ಲಪಟಾಯಿಸಲು ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಐಟಂ-1 ಮತ್ತು 2 ರ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.